1 ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 166–2023

**ಪಿ.ಡಬ್ಲ್ಯು -14, ಪಿ.ಡಬ್ಲ್ಯು -8**

**ಸಾಕ್ಷಿದಾರರ ಹೆಸರು** : ಸಂತೋಷ್
ತಂದೆಯ **ಹೆಸರು** : ಠಾಕ್ರಾನಾಯ್ಕ
**ವಯಸ್ಸು** : 30 ವರ್ಷ
**ಉದ್ಯೋಗ** : ಪೊಲೀಸ್ ಪೇದೆ, ಜಯನಗರ ಪೊಲೀಸ್ ಠಾಣೆ,
**ವಾಸ** : ಶಿವಮೊಗ್ಗ

**ಪ್ರಮಾಣೀಕರಿಸಿದ ದಿನಾಂಕ :28.07.2026.**

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು 2017 ರಿಂದ 2023 ರವರೆಗೂ ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ04.03.2021 ರಂದು ನಾನು ಕಚೇರಿಯಲ್ಲಿ ಇದ್ದಾಗ ಚಾಸ 17 ರವರು ಈ ಪ್ರಕರಣದಲ್ಲಿ ಮಾದರಿಗಾಗಿ ಕಾಯ್ದಿರಿಸಿದ ಸ್ಫೋಟಕವನ್ನು ಬೆಂಗಳೂರಿನ ರಾಸಾಯನಿಕ ಪ್ರಯೋಗಾಲಯಕ್ಕೆ ಪರೀಕ್ಷೆಗೆ ತೆಗೆದುಕೊಂಡು ಹೋಗುವಂತೆ ಮೌಖಿಕವಾಗಿ ತಿಳಿಸಿರುತ್ತಾರೆ.

3. ದಿಃ12.03.2021 ರಂದು ನಾನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಶಿವಮೊಗ್ಗ ರವರ ಅನುಮತಿ ಪಡೆದು ಮಾದರಿಗಾಗಿ ಕಾಯ್ದಿರಿಸಿದ ಸ್ಫೋಟಕವನ್ನು ನಿವೇದನಾ ಪತ್ರದೊಂದಿಗೆ ಬೆಂಗಳೂರಿನ ರಾಸಾಯನಿಕ ಪ್ರಯೋಗಾಲಯಕ್ಕೆ ಹೋಗಿ ಮಾದರಿಯನ್ನು ಮತ್ತು ನಿವೇದನಾ ಪತ್ರವನ್ನು ಪ್ರಯೋಗಾಲಯದವರಿಗೆ ನೀಡಿ ಅವರಿಂದ ಸ್ವೀಕೃತಿಯನ್ನು ಪಡೆದು ದಿಃ13.03.2021 ರಂದು ಸ್ವೀಕೃತಿಯನ್ನು ಚಾಸ 17 ರವರಿಗೆ ನೀಡಿರುತ್ತೇನೆ.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಕೆ.ಆರ್. ವಕೀಲರಿಂದ

1. ರಾಸಾಯನಿಕ ಪ್ರಯೋಗಾಲಯಕ್ಕೆ ಹೋಗುವಂತೆ ನನಗೆ ಲಿಖಿತ ಆದೇಶವಿರುವುದಿಲ್ಲ. ರಸಾಯನಿಕ ಪ್ರಯೋಗಾಲಯಕ್ಕೆ ಹೋಗಿ ಬಂದ ಕುರಿತು ಪಾಸ್ ಪೋರ್ಟ್ ಅನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ನಾನು ತನಿಖಾಧಿಕಾರಿಗೆ ನೀಡಿದ ಪಾಸ್ ಪೋರ್ಟ್ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ.

ನಾನು ರಾಸಾಯನಿಕ ಪ್ರಯೋಗಾಲಯಕ್ಕೆ ಯಾವುದೇ ಸ್ಫೋಟಕಗಳನ್ನು ಪರೀಕ್ಷೆಗೆಂದು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.